**ನಗರಾಭಿವೃದ್ಧಿ ಮಂತ್ರಾಲಯ**
**ಅಧಿಸೂಚನೆ**
**ನವದೆಹಲಿ 25ನೇ ಮೇ, 2011**

**ಜಿಎಸ್‌ಆರ್ ಸಂ. 404(ಇ)** – ದೆಹಲಿ ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002ರ 60)ರ 53ನೇ ಪ್ರಕರಣದ (3)ನೇ ಉಪಪ್ರಕರಣದ ಜೊತೆಗೆ ಓದಲಾದ 56ನೇ ಪ್ರಕರಣದ (2)ನೇ ಉಪಪ್ರಕರಣದ (111)ನೇ ಖಂಡ ಮತ್ತು 100ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕೇಂದ್ರ ಸರ್ಕಾರವು ಈ ಮುಂದಿನ ನಿಯಮಗಳನ್ನು ಈ ಮೂಲಕ ರಚಿಸುತ್ತದೆ, ಎಂದರೆ :-

1. **ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ನಿಯಮಗಳನ್ನು ಬೆಂಗಳೂರು ಮೆಟ್ರೋ ರೈಲ್ವೆ (ಕ್ಲೇಮುಗಳಿಗಾಗಿ ಕಾರ್ಯವಿಧಾನ) ನಿಯಮಗಳು, 2011 ಎಂದು ಕರೆಯತಕ್ಕದ್ದು.

   (2) ಅವು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:-** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

   ‘‘(ಎ) ‘‘ಅಧಿನಿಯಮ’’ ಎಂದರೆ ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) ಅಧಿನಿಯಮ, 2002 (2002ರ 60) ;

(ಬಿ) “ಕ್ಲೇಮುಗಳ ಆಯುಕ್ತ” ಎಂದರೆ, ಅಧಿನಿಯಮದ 48ನೇ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಕ್ಲೇಮುಗಳ ಆಯುಕ್ತ;

(ಸಿ) “ಅರ್ಜಿದಾರ” ಎಂದರೆ, ಅಧಿನಿಯಮದ 58ನೇ ಪ್ರಕರಣದ ಮೇರೆಗೆ ಕ್ಲೇಮುಗಳ ಆಯುಕ್ತರಿಗೆ ಅರ್ಜಿ ಸಲ್ಲಿಸುವ ವ್ಯಕ್ತಿ ;

(ಡಿ) “ನಮೂನೆ” ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ನಮೂನೆ;

(ಇ) “ನ್ಯಾಯವಾದಿ” ಎಂಬುದಕ್ಕೆ 1961ರ ನ್ಯಾಯವಾದಿಗಳ ಅಧಿನಿಯಮ (1961ರ 25)ದ 2ನೇ ಪ್ರಕರಣದ (1)ನೇ ಖಂಡದ ಮೇರೆಗೆ ಅದಕ್ಕೆ ಗೊತ್ತುಪಡಿಸಿದಂತಹದೇ ಅರ್ಥವನ್ನು ಹೊಂದಿರತಕ್ಕದ್ದು;

(ಎಫ್) “ಕಾನೂನು ಸಮ್ಮತ ಪ್ರತಿನಿಧಿ” ಎಂದರೆ, ಕಾನೂನಿನಲ್ಲಿ ಮೃತವ್ಯಕ್ತಿಯ ಸಂಪದವನ್ನು ಪ್ರತಿನಿಧಿಸುವ ವ್ಯಕ್ತಿ ;

(ಜಿ) “ಅನುಸೂಚಿ” ಎಂದರೆ ಈ ನಿಯಮಗಳಿಗೆ ಅನುಬಂಧಿಸಲಾಧ ಅನುಸೂಚಿ;

(ಹೆಚ್) “ಪ್ರಕರಣ” ಎಂದರೆ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಇಲ್ಲಿ ಪರಿಭಾಷಿಸದಿರುವ ಮತ್ತು 2002ರ ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ)

ಅಧಿನಿಯಮ (2002ರ 60)ದಲ್ಲಿ ಪರಿಭಾಷಿಸಿರುವ ಪದಗಳು ಮತ್ತು ಪದಾವಳಿಗಳ ಆ ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಗೊತ್ತುಪಡಿಸಿರುವಂಥ ಅರ್ಥಗಳನ್ನು ಹೊಂದಿರತಕ್ಕದ್ದು.

3. **ಅರ್ಜಿಗಳನ್ನು ದಾಖಲ್ಮಾಡಲು ಕಾರ್ಯವಿಧಾನ .–** (1) ಮೆಟ್ರೋ ರೈಲ್ವೆ ಕಾರ್ಯ ನಿರ್ವಹಿಸು ಅವಧಿಯಲ್ಲಿ ವ್ಯಕ್ತಿ ಮರಣ ಅಥವಾ ಶಾರೀರಿಕ ಗಾಯ ಅಥವಾ ಯಾವುದೇ ಸ್ವತ್ತಿನ ಹಾನಿಗಳನ್ನು ಒಳಗೊಂಡ ಅಪಘಾತಗಳ ಸಂಬಂಧದಲ್ಲಿ ಪರಿಹಾರ ಸಂದಾಯಕ್ಕಾಗಿ ಕ್ಲೇಮುಗಳ ಆಯುಕ್ತರಿಗೆ ಸಲ್ಲಿಸುವ ಅರ್ಜಿಯನ್ನು, ಎರಡನೇ ಅನುಸೂಚಿಯಲ್ಲಿ ಕೊಟ್ಟಿರುವ ನಮೂನೆಯಲ್ಲಿ, ಖುದ್ದು ಅರ್ಜಿದಾರನಾಗಲೀ ಅಥವಾ ಅವನಿಂದ ವಿಧ್ಯುಕ್ತವಾಗಿ ಅಧಿಕೃತಗೊಂಡ ಕಾನೂನುಸಮ್ಮತ ಪ್ರತಿನಿಧಿಯ ಮೂಲಕವಾಗಲೀ ಹಾಜರುಪಡಿಸತಕ್ಕದ್ದು:

ಪರಂತು, ಅರ್ಜಿಯನ್ನು ಕ್ಲೇಮುಗಳ ಆಯುಕ್ತನಿಗೆ ನೋಂದಾಯಿತ ಅಂಚೆಯ ಮೂಲಕವೂ ಸಹ ಕಳುಹಿಸಬಹುದು.

(2) (1)ನೇ ಉಪನಿಯಮದ ಮೇರೆಗೆ ಉಲ್ಲೇಖಿಸಲಾದ ಅರ್ಜಿಯನ್ನು ದ್ವಿಪ್ರತಿಯಲ್ಲಿ ಹಾಜರುಪಡಿಸತಕ್ಕದ್ದು.

(3) ಪ್ರತಿಯೊಂದು ಅರ್ಜಿಯನ್ನು ಒಳ್ಳೆಯ ಗುಣಮಟ್ಟದ ಹಾಳೆಯ ಒಂದೇ ಮಗ್ಗುಲಿನಲ್ಲಿ ಸಾಲುಗಳ ಮಧ್ಯೆ ಎರಡು ಸಾಲುಗಳ ಸ್ಥಳ ಬಿಟ್ಟು ಬೆರಳಚ್ಚು ಮಾಡತಕ್ಕದ್ದು.

4. **ಅರ್ಜಿಯ ಪರಿಶೀಲನೆ.–** (1) ಕ್ಲೇಮುಗಳ ಆಯುಕ್ತರು, ನಿಯಮ 3ರ ಮೇರೆಗೆ ಪ್ರತಿಯೊಂದು ಅರ್ಜಿಯ ಮೇಲೆ, ಅದನ್ನು ಯಾವ ದಿನಾಂಕದಂದು

ಹಾಜರುಪಡಿಸಲಾಯಿತು ಅಥವಾ ಸ್ವೀಕರಿಸಲಾಯಿತು ಎಂಬುದಕ್ಕೆ ಹಿಂಬರಹ ಬರೆಯತಕ್ಕದ್ದು ಮತ್ತು ಹಿಂಬರಹಕ್ಕೆ ಸಹಿ ಹಾಕತಕ್ಕದ್ದು.

(2) ಪರಿಶೀಲನೆ ಮೇರೆಗೆ ಅರ್ಜಿಯು ಕ್ರಮಬದ್ಧವಾಗಿದೆ ಎಂದು ಕಂಡುಬಂದರೆ, ಅದನ್ನು ನೊಂದಾಯಿಸತಕ್ಕದ್ದು ಮತ್ತು ಅದಕ್ಕೆ ಕ್ರಮಸಂಖ್ಯೆಯನ್ನು ನೀಡತಕ್ಕದ್ದು.

(3) ಪರಿಶೀಲನೆ ಮೇರೆಗೆ ಅರ್ಜಿಯು ದೋಷಪೂರಿತವಾಗಿದೆ ಎಂದು ಕಂಡುಬಂದರೆ ಮತ್ತು ಗಮನಿಸಲಾದ ದೋಷವು ಸಾಮಾನ್ಯ ಸ್ವರೂಪದ್ದಾಗಿದ್ದರೆ, ಕ್ಲೇಮುಗಳ ಆಯುಕ್ತನು ಆತನ ಎದುರಿನಲ್ಲೇ ಅದನ್ನು ಸರಿಪಡಿಸಲು ಅರ್ಜಿದಾರನಿಗೆ ಅನುಮತಿ ನೀಡಬಹುದು, ಹಾಗೂ ದೋಷಗಳು ಸಾಮಾನ್ಯ ಸ್ವರೂಪದ್ದಲ್ಲವೆಂದು ಕಂಡುಬಂದರೆ, ಕ್ಲೇಮುಗಳ ಆಯುಕ್ತನು ದೋಷವನ್ನು ಸರಿಪಡಿಸಲು ತನಗೆ ಸೂಕ್ತವೆಂದು ಭಾವಿಸಬಹುದಾದಂತಹ ಸಮಯವನ್ನು ಅರ್ಜಿದಾರನಿಗೆ ನೀಡಬಹುದು.

(4) ಅರ್ಜಿದಾರನು, (3)ನೇ ಉಪನಿಯಮದ ಮೇರೆಗೆ ಅನುಮತಿಸಲಾದ ಸಮಯದೊಳಗೆ ದೋಷಗಳನ್ನು ಸರಿಪಡಿಸಲು ವಿಫಲನಾದರೆ, ಕ್ಲೇಮುಗಳ ಆಯುಕ್ತನು, ಆದೇಶದ ಮೂಲಕ ಮತ್ತು ಲಿಖಿತದಲ್ಲಿ ದಾಖಲಿಸಲಿರುವ ಕಾರಣಗಳಿಗಾಗಿ ಅರ್ಜಿಯನ್ನು ನೋಂದಾಯಿಸಲು ನಿರಾಕರಿಸಬಹುದು ಮತ್ತು ಅದರನುಸಾರವಾಗಿ ದನ್ನು ಅರ್ಜಿದಾರನಿಗೆ ತಿಳಿಸಬಹುದು.

(5) (4)ನೇ ಉಪನಿಯಮದ ಮೇರೆಗೆ ಹೊರಡಿಸಲಾದ ಆದೇಶದ ವಿರುದ್ಧ ಬಾಧಿತನಾದ ವ್ಯಕ್ತಿಯು ಅಂತಹ ಆದೇಶದ ದಿನಾಂಕದಿಂದ ಹದಿನೈದು

ದಿನಗಳೊಳಗಾಗಿ ಅಪೀಲನ್ನು ಸಲ್ಲಿಸಬಹುದು ಮತ್ತು ಅಂತಹ ಅಪೀಲನ್ನು ಕ್ಲೇಮುಗಳ ಆಯುಕ್ತರು ನಿರ್ವಹಿಸತಕ್ಕದ್ದು ಮತ್ತು ಇತ್ಯರ್ಥಗೊಳಿಸತಕ್ಕದ್ದು.

5. **ಮೆಟ್ರೋ ರೈಲ್ವೆ ಆಡಳಿತ ವರ್ಗಕ್ಕೆ ನೋಟೀಸು.–** (1) ಕ್ಲೇಮುಗಳ ಆಯುಕ್ತರು, ಅರ್ಜಿಯ ವಿರುದ್ಧ ಕಾರಣವನ್ನು ತೋರಿಸಲು ಅದರಲ್ಲಿ ನಿರ್ದಿಷ್ಟಪಡಿಸಲಾದ ವಿಚಾರಣೆಯ ದಿನಾಂಕದಂದು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗಕ್ಕೆ ನೋಟೀಸನ್ನು ನೀಡತಕ್ಕದ್ದು.

(2) (1)ನೇ ಉಪನಿಯಮಕ್ಕೆ ಉಲ್ಲೇಖಿಸಲಾದ ನೋಟೀಸಿನ ಜೊತೆಗೆ ಅರ್ಜಿಯ ಒಂದು ಪ್ರತಿಯು ಇರತಕ್ಕದ್ದು.

(3) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗದ ಪ್ರತಿನಿಧಿಯು (1)ನೇ ಉಪನಿಯಮದಲ್ಲಿ ಉಲ್ಲೇಖಿಸಲಾದ ನೋಟಿಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಹಾಜರಾಗದಿದ್ದರೆ, ಅಥವಾ ಹಾಜರಾಗಿ ಕ್ಲೇಮನ್ನು ಅಂಗೀಕರಿಸಿದರೆ, ಕ್ಲೇಮು ಆಯುಕ್ತರು ಕೂಡಲೇ ಅರ್ಜಿಯನ್ನು ವಿಲೇ ಮಾಡಲು ಮುಂದುವರಿಯಬಹುದು.

(4) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವು ಕ್ಲೇಮನ್ನು ವಿರೋಧಿಸಿದರೆ, ಅದು, ಅವಲಂಬಿಸಿದಂತಹ ದಸ್ತಾವೇಜಿನ ಒಂದು ಪ್ರತಿಯೊಂದಿಗೆ ಉತ್ತರವನ್ನು ವಿಚಾರಣೆಯ ದಿನಾಂಕದಂದು ಅಥವಾ ಒಳಗಾಗಿ ದಾಖಲಿಸಬಹುದು ಮತ್ತು ಅಂತಹ ಉತ್ತರ ಮತ್ತು ದಸ್ತಾವೇಜಿನ ಪ್ರತಿಗಳು ದಾಖಲೆಯ ಒಂದು ಭಾಗವಾಗಿರತಕ್ಕದ್ದು.

6. **ಅಫಿಡವಿಟ್ಟನ್ನು ದಾಖಲ್ಮಾಡುವುದು.–** (1) ಕ್ಲೇಮುಗಳ ಆಯುಕ್ತರು, ಅರ್ಜಿದಾರ ಮತ್ತು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗಕ್ಕೆ ಅವರ ಕ್ಲೇಮುಗಳಿಗೆ ಸಮರ್ಥನೆಯಾಗಿ ಯಾವುದಾದರೂ ಸಾಕ್ಷ್ಯವಿದ್ದರೆ ಅದನ್ನು ಅಫಿಡವಿಟ್‌ನ ಮೂಲಕ ನೀಡುವಂತೆ ನಿರ್ದೇಶನ ನೀಡಬಹುದು.

(2) (1)ನೇ ಉಪನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಕ್ಲೇಮುಗಳ ಆಯುಕ್ತರು, ಪ್ರಕರಣದ ಯುಕ್ತ ನಿರ್ಣಯಕ್ಕಾಗಿ ಅವಶ್ಯವೆಂದು ಪರಿಗಣಿಸಿದರೆ, ಆತನು ಯಾರೇ ಸಾಕ್ಷಿದಾರನ ಪಾಟೀಸವಾಲಿಗೆ ಆದೇಶ ನೀಡಬಹುದು.

7. **ಪ್ರತಿವಾದಿಗಳು ಉತ್ತರಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ದಾಖಲ್ಮಾಡುವುದು.–** (1) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವು ಅರ್ಜಿಗೆ ಮತ್ತು ದಸ್ತಾವೇಜುಗಳ ಪ್ರತಿಗಳಿಗೆ ತನ್ನ ಉತ್ತರವನ್ನು, ಅರ್ಜಿ ವಿಚಾರಣೆ ಮಾಡುವ ದಿನಾಂಕದಂದು ಅಥವಾ ಒಳಗಾಗಿ ದಾಖಲ್ಮಾಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಸಲ್ಲಿಸಲಾದ ಉತ್ತರದಲ್ಲಿ ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವು ಅರ್ಜಿಯಲ್ಲಿ ನಮೂದಿಸಿದ ಸಂಗತಿಗಳನ್ನು ನಿರ್ದಿಷ್ಟವಾಗಿ ಒಪ್ಪಿಕೊಳ್ಳತಕ್ಕದ್ದು, ನಿರಾಕರಿಸತಕ್ಕದ್ದು ಅಥವಾ ವಿವರಿಸತಕ್ಕದ್ದು ಮತ್ತು ಅಗತ್ಯವಾದ ಹೆಚ್ಚುವರಿ ಸಂಗತಿಗಳನ್ನು ನಮೂದಿಸತಕ್ಕದ್ದು.

8. **ಅರ್ಜಿಯ ಕ್ಷಿಪ್ರ ವಿಲೇವಾರಿ.–** ಕ್ಲೇಮುಗಳ ಆಯುಕ್ತನು, ಅರ್ಜಿಯನ್ನು ಪರಿಶೀಲಿಸಿದ ನಂತರ, ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ, ಅದರ ಮುಂದುವರಿಕೆಗೆ

ಸಾಕಷ್ಟು ಕಾರಣಗಳಿಲ್ಲವೆನ್ನುವ ಅಭಿಪ್ರಾಯಕ್ಕೆ ಆತನು ಬಂದಲ್ಲಿ ಅರ್ಜಿಯನ್ನು ಕ್ಷಿಪ್ರವಾಗಿ ವಜಾಗೊಳಿಸಬಹುದು.

9. **ಏಕಪಕ್ಷೀಯ ವಿಚಾರಣೆ ಮತ್ತು ಅರ್ಜಿಯ ವಿಲೇವಾರಿ.**–(1) ವಿಚಾರಣೆಯನ್ನು ಗೊತ್ತುಪಡಿಸಿದ ದಿನಾಂಕದಂದು ಅಥವಾ ಅಂತಹ ವಿಚಾರಣೆಯನ್ನು ಮುಂದೂಡಬಹುದಾದ ಯಾವುದೇ ಇತರ ದಿನಾಂಕದಂದು, ಅರ್ಜಿದಾರನು ಹಾಜರಾದರೆ, ಮತ್ತು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗದ ಪ್ರತಿನಿಧಿಯು ಹಾಜರಾಗದಿದ್ದರೆ ಕ್ಲೇಮುಗಳ ಆಯುಕ್ತನು, ಅವನ ವಿವೇಚನೆಯ ಮೇರೆಗೆ ವಿಚಾರಣೆಯನ್ನು ಮುಂದೂಡಬಹುದು ಅಥವಾ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಬಹುದು ಮತ್ತು ನಿರ್ಣಯ ನೀಡಬಹುದು.

(2) ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗದ ವಿರುದ್ಧ ಅರ್ಜಿಯನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಿರುವಲ್ಲಿ, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವು, ಅದನ್ನು ತಳ್ಳಿಹಾಕುವಂತೆ ಕ್ಲೇಮುಗಳ ಆಯುಕ್ತರಿಗೆ ಅರ್ಜಿ ಸಲ್ಲಿಸಬಹುದು ಮತ್ತು ಅರ್ಜಿದಾರನು ಕ್ಲೇಮುಗಳ ಆಯುಕ್ತರಿಗೆ, ನೋಟೀಸನ್ನು ಕ್ರಮಬದ್ಧವಾಗಿ ಜಾರಿ ಮಾಡಿಲ್ಲವೆಂದು ಅಥವಾ ಅದರ ಪ್ರತಿನಿಧಿಯು ಯಾವುದೇ ಪರ್ಯಾಪ್ತ ಕಾರಣದಿಂದಾಗಿ ಹಾಜರಾಗುವುದರಿಂದ ಸಾಧ್ಯವಾಗಲಿಲ್ಲವೆಂಬುದನ್ನು ಕ್ಲೇಮುಗಳ ಆಯುಕ್ತನಿಗೆ ಮನವರಿಕೆ ಮಾಡಿದರೆ, ಕ್ಲೇಮುಗಳ ಆಯುಕ್ತರು ಅವರು ಸೂಕ್ತವೆಂದು ಭಾವಿಸಬಹುದಾದಂತಹ ನಿಬಂಧನೆಗಳ ಮೇಲೆ ಏಕಪಕ್ಷೀಯ ವಿಚಾರಣೆಯನ್ನು ತಳ್ಳಿಹಾಕುವ ಆದೇಶವನ್ನು ಮಾಡಬಹುದು ಮತ್ತು ಅರ್ಜಿಯೊಂದಿಗೆ ಮುನ್ನಡೆಯಲು ದಿನವನ್ನು ಗೊತ್ತುಪಡಿಸಬಹುದು.

10. **ದೋಷವಿರುವ ಅರ್ಜಿಯ ವಿಲೇವಾರಿ.–** (1) ವಿಚಾರಣೆಯನ್ನು ನಿಗದಿಪಡಿಸಿದ ದಿನಾಂಕದಂದು, ಅಥವಾ ಅಂತಹ ವಿಚಾರಣೆಯನ್ನು ಮುಂದೂಡಬಹುದಾದ ಯಾವುದೇ ಇತರ ದಿನಾಂಕದಂದು, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗದ, ಪ್ರತಿನಿಧಿಯು ಹಾಜರಾಗಿದ್ದರೆ ಮತ್ತು ಅರ್ಜಿದಾರನು ಹಾಜರಾಗದಿದ್ದರೆ, ಕ್ಲೇಮುಗಳ ಆಯುಕ್ತನು, ಆತನ ವಿವೇಚನೆಯ ಮೇರೆಗೆ ವಿಚಾರಣೆಯನ್ನು ಮುಂದೂಡಬಹುದು ಅಥವಾ ದೋಷದ ವಿಚಾರಣೆ ನಡೆಸಿ ದೋಷಪೂರ್ಣ ಅರ್ಜಿಯ ಬಗ್ಗೆ ನಿರ್ಧರಿಸಬಹುದು.

(2) ಅರ್ಜಿದಾರನ ವಿರುದ್ಧ ಅರ್ಜಿಯ ದೋಷವಿರುವ ವಿಚಾರಣೆ ಅರ್ಜಿಯನ್ನು ವಿಚಾರಣೆ ಮಾಡಿದ್ದಲ್ಲಿ ಮತ್ತು ಅರ್ಜಿದಾರನ ವಿರುದ್ಧ ದೋಷಪೂರ್ಣವಾಗಿ ವಿಲೇವಾಗಿ ಮಾಡಿದ್ದಲ್ಲಿ ಅರ್ಜಿದಾರನು ಅದನ್ನು ತಳ್ಳಿಹಾಕುವಂತೆ ಯಾವುದೇ ಆದೇಶವನ್ನು ನೀಡಲು ಕ್ಲೇಮುಗಳ ಆಯುಕ್ತರಿಗೆ ಅರ್ಜಿ ಸಲ್ಲಿಸಬಹುದು ಮತ್ತು ನೋಟೀಸನ್ನು ಕ್ರಮಬದ್ಧವಾಗಿ ತನಗೆ ಜಾರಿಮಾಡಿರಲಿಲ್ಲವೆಂದು ಅಥವಾ ಆತನು ಯಾವುದೇ ಪರ್ಯಾಪ್ತ ಕಾರಣಗಳಿಂದಾಗಿ ಹಾಜರಾಗಲು ಸಾಧ್ಯವಾಗಲಿಲ್ಲವೆಂದು ಕ್ಲೇಮುಗಳ ಆಯುಕ್ತನಿಗೆ ಮನವರಿಕೆ ಮಾಡಿದರೆ ಕ್ಲೇಮುಗಳ ಆಯುಕ್ತನು ತಾವು ಸೂಕ್ತವೆಂದು ಭಾವಿಸುವಂತಹ ನಿಬಂಧನೆಗಳ ಮೇಲೆ ದೋಷಪೂರ್ಣ ವಜಾವಣೆಯನ್ನು ತಳ್ಳಿಹಾಕಲು ಆದೇಶ ನೀಡಬಹುದು ಮತ್ತು ಅರ್ಜಿಯ ಜೊತೆಗೆ ಮುಂದುವರಿಯುವ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು.

11. **ಸಾಕ್ಷಿಗಳನ್ನು ಸಮನು ಮಾಡುವುದು ಮತ್ತು ಸಾಕ್ಷ್ಯವನ್ನು ದಾಖಲ್ಮಾಡುವ ವಿಧಾನ.–**(1) ಯಾರೇ ವ್ಯವಹರಣೆಯ ಪಕ್ಷಕಾರನು ಸಾಕ್ಷಿಗಳನ್ನು ಸಮನು ಮಾಡುವುದಕ್ಕೆ ಅರ್ಜಿಯನ್ನು ಸಲ್ಲಿಸಿದಲ್ಲಿ ಕ್ಲೇಮುಗಳ ಆಯುಕ್ತನು, ಮೊಕದ್ದಮೆಯ ನ್ಯಾಯಸಮ್ಮತ ನಿರ್ಣಯಕ್ಕಾಗಿ ವರ ಹಾಜರಾತಿಯು ಅವಶ್ಯವಿಲ್ಲವೆಂದು

ಪರಿಗಣಿಸಿದ ಹೊರತು, ಅಂತಹ ಸಾಕ್ಷಿದಾರರಿಗೆ ಹಾಜರಾತಿಗೆ ಸಮನುಗಳನ್ನು ನೀಡತಕ್ಕದ್ದು.

(2) ಕ್ಲೇಮುಗಳ ಆಯುಕ್ತರು, ಸಾಕ್ಷಿಯ ವಿಚಾರಣೆ ಮುಂದುವರಿದಂತೆ ಪ್ರತಿಯೊಬ್ಬ ಸಾಕ್ಷಿಯ ಸಾಕ್ಷ್ಯದ ಸಾರದ ಒಂದು ಸಂಕ್ಷಿಪ್ತ ವಿವರಣೆಯನ್ನು ಮಾಡತಕ್ಕದ್ದು ಮತ್ತು ಅಂತಹ ವಿವರಣೆಯ ದಾಖಲೆಯ ಭಾಗವಾಗತಕ್ಕದ್ದು :

ಪರಂತು, ಕ್ಲೇಮುಗಳ ಆಯುಕ್ತನು, ಅಂತಹ ವಿವರಣೆಯನ್ನು ಮಾಡದಿದ್ದರೆ, ಹಾಗೆ ಮಾಡುವಲ್ಲಿನ ಆತನ ಅಸಮರ್ಥತೆಗೆ ಕಾರಣಗಳನ್ನು ದಾಖಲಿಸತಕ್ಕದ್ದು ಮತ್ತು ಅಂತಹ ವಿವರಣೆಯನ್ನು ಲಿಖಿತದಲ್ಲಿ ಮಾಡುವಂತೆ ಮಾಡತಕ್ಕದ್ದು ಮತ್ತು ಅದಕ್ಕೆ ಸಹಿ ಹಾಕತಕ್ಕದ್ದು ಮತ್ತು ಅಂತಹ ವಿವರಣೆಯ ದಾಖಲೆಯ ಭಾಗವಾಗತಕ್ಕದ್ದು.

12. **ಕ್ಲೇಮುಗಳ ಆಯುಕ್ತರ ನಿರ್ಣಯ.–** ಕ್ಲೇಮುಗಳ ಆಯುಕ್ತನು, ಪ್ರತಿಯೊಂದು ಅರ್ಜಿಯನ್ನು, ದಸ್ತಾವೇಜುಗಳನ್ನು, ಅಫಿಡವಿಟ್‌ಗಳನ್ನು ಮತ್ತು ಇತರ ಸಾಕ್ಷ್ಯಗಳಿದ್ದರೆ ಅವುಗಳನ್ನು ಪರಿಶೀಲಿಸಿದ ಮೇಲೆ ಮತ್ತು ನೀಡಬಹುದಾದಂತಹ ಮೌಖಿಕ ವಾದಗಳನ್ನು ಆಲಿಸಿದ ನಂತರ ಸಾಧ್ಯವಾದಷ್ಟು ಬೇಗನೆ ಇತ್ಯರ್ಥಗೊಳಿಸತಕ್ಕದ್ದು.

13. **ಆದೇಶವವನ್ನು ಹೊರಡಿಸುವುದು ಮತ್ತು ಅದಕ್ಕೆ ಸಹಿ ಮಾಡುವುದು.–** (1) ಕ್ಲೇಮುಗಳ ಆಯುಕ್ತನು, ಅರ್ಜಿದಾರನನ್ನು ಮತ್ತು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವನ್ನು ಸುನಾವಣೆ ಮಾಡಿದ ನಂತರ/ಆಲಿಸಿದ ನಂತರ ಅವರು

ಸೂಕ್ತವೆಂದು ಭಾವಿಸುವಂತಹ ಆದೇಶವನ್ನು ತಕ್ಷಣವೇ ಅಥವಾ ತದನಂತರ ಕಾರ್ಯಸಾಧ್ಯವಾದಷ್ಟು ಬೇಗನೆ ಹೊರಡಿಸತಕ್ಕದ್ದು.

(2) ಕ್ಲೇಮುಗಳ ಆಯುಕ್ತನ ಪ್ರತಿಯೊಂದು ಆದೇಶವು ಲಿಖಿತದಲ್ಲಿರತಕ್ಕದ್ದು ಮತ್ತು ಅದಕ್ಕೆ ಆತನು ಸಹಿ ಮಾಡಿರತಕ್ಕದ್ದು.

(3) ಕ್ಲೇಮುಗಳ ಆಯುಕ್ತನು ಮಾಡಿದ ಆದೇಶವನ್ನು ಸಿವಿಲ್ ನ್ಯಾಯಾಲಯದ ಡಿಕ್ರಿ ಮತ್ತು 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ಎಂಬಂತೆ ಅವು ಸಿವಿಲ್ ನ್ಯಾಯಾಲಯದ ಡಿಕ್ರಿಯ ಸಂಬಂಧದಲ್ಲಿ ಅನ್ವಯವಾಗುವಷ್ಟರಮಟ್ಟಿಗೆಯೇ ಅನ್ವಯಿಸತಕ್ಕದ್ದು.

14. **ನಿರ್ಣಯದ ಪುನರ್‌ಪರಿಶೀಲನೆ.–** (1) ದಾಖಲೆಯ ಮೇಲ್ನೋಟಕ್ಕೆ ಗೋಚರವಾಗುವಂತೆ ಯಾವುದಾದರೂ ದೋಷ ಅಥವಾ ತಪ್ಪಿನ ಕಾರಣದ ಮೇಲೆ, ಅಥವಾ ಯಾವುದೇ ಇತರ ಪರ್ಯಾಪ್ತ ಕಾರಣದ ಮೇಲೆ ಕ್ಲೇಮುಗಳ ಆಯುಕ್ತರ ಯಾವುದೇ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಸಮಾಧಾನಗೊಂಡಿದ್ದರೆ, ಅವನು, ವಾದಕಾಲೀನ ಆದೇಶವಾಗಿರದ ಅಂತಿಮ ಆದೇಶದ ಪುನರ್‌ಪರಿಶೀಲನೆಗಾಗಿ ಕ್ಲೇಮುಗಳ ಆಯುಕ್ತನಿಗೆ ಅರ್ಜಿ ಸಲ್ಲಿಸಬಹುದು.

(2) ಪುನರ್‌ಪರಿಶೀಲನೆಗೆ ಸಾಕಷ್ಟು ಕಾರಣವಿಲ್ಲವೆಂಬುದು ಕ್ಲೇಮುಗಳ ಆಯುಕ್ತನಿಗೆ ಕಂಡುಬಂದರೆ, ಅವನು ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

(3) ಪುನರ್‌ಪರಿಶೀಲನೆಗಾಗಿ ಮಾಡಲಾದ ಅರ್ಜಿಯಲ್ಲಿನ ಕಾರಣಗಳು ಕ್ಲೇಮುಗಳ ಆಯುಕ್ತನಿಗೆ ಮನವರಿಕೆಯಾದರೆ ಮತ್ತು ಅದನ್ನು

ನ್ಯಾಯನೀಡಿಕೆಯ ಹಿತಾಸಕ್ತಿಯಲ್ಲಿ ಪರಿಗಣಿಸಿದರೆ, ಅವನು ಅರ್ಜಿಯನ್ನು ಪುರಸ್ಕರಿಸತಕ್ಕದ್ದು :

ಪರಂತು, ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗದವರಿಗೆ ಪೂರ್ವಸೂಚನೆ ನೀಡದೇ ಅಥವಾ ಪುನರ್‌ಪರಿಶೀಲನೆಗಾಗಿನ ಆದೇಶದ ಸಮರ್ಥನೆಗಾಗಿ ಹಾಜರಾಗಲು ಮತ್ತು ಆ ಬಗ್ಗೆ ಹೇಳಿಕೊಳ್ಳಲು ಅವಕಾಶ ಮಾಡಿಕೊಡದ ಹೊರತು, ಆ ಪುನರ್‌ಪರಿಶೀಲನೆಯ ಯಾವುದೇ ಅರ್ಜಿಯನ್ನೂ ಅನುಮತಿಸತಕ್ಕದ್ದಲ್ಲ.

15. **ಕ್ಲೇಮುಗಳ ಆಯುಕ್ತನ ಆದೇಶಗಳು ಅಥವಾ ನಿರ್ದೇಶನಗಳು.–** ಈ ನಿಯಮಗಳಲ್ಲಿರುವುದು ಯಾವುದೂ ಕ್ಲೇಮುಗಳ ಆಯುಕ್ತನು ತನ್ನ ಆದೇಶಗಳನ್ನು ಜಾರಿಗೊಳಿಸಲು ಅಥವಾ ಅಂತಹ ನಿರ್ದೇಶನಗಳನ್ನು ನೀಡಲು ಅಥವಾ ಪ್ರಕ್ರಿಯೆಯ ದುರುಪಯೋಗವನ್ನು ನಿವಾರಿಸಲು ಅಥವಾ ನ್ಯಾಯೋದ್ದೇಶವನ್ನು ಪಡೆಯಲು ಅವಶ್ಯವಿರಬಹುದಾದಂತಹ ಅಥವಾ ಯುಕ್ತವೆನಿಸಬಹುದಾದಂತಹ ಆದೇಶಗಳನ್ನು ಹೊರಡಿಸಲು ಪರಿಮಿತಗೊಳಿಸುತ್ತದೆ ಎಂದಾಗಲಿ ಅಥವಾ ಕ್ಲೇಮುಗಳ ಆಯುಕ್ತರ ಅಧಿಕಾರವನ್ನು ಅನ್ಯಥಾ ಮೊಟಕುಗೊಳಿಸುತ್ತದೆ ಎಂದಾಗಲೀ ಭಾವಿಸತಕ್ಕದ್ದಲ್ಲ.

16. **ಪರಿಣತರ ಸಂಘ.–** (1) ಕ್ಲೇಮುಗಳ ಆಯುಕ್ತನು, ನಷ್ಟಪರಿಹಾರದ ಉದ್ದೇಶಕ್ಕಾಗಿ ಯಾವುದೇ ಕ್ಲೇಮನ್ನು ನಿರ್ಣಯಿಸುವ ಉದ್ದೇಶಕ್ಕಾಗಿ ವಿಚಾರಣೆಗೆ ಸೂಕ್ತವಾದ ಯಾವುದೇ ವಿಷಯದ ಬಗ್ಗೆ ಯಾವುದೇ ಜ್ಞಾನವನ್ನು ಹೊಂದಿರುವ ಒಬ್ಬ ಅಥವಾ ಹೆಚ್ಚು ಪರಿಣಿತರನ್ನು ಭಾಗಿಯಾಗಿಸಬಹುದು.

(2) ಕ್ಲೇಮುಗಳ ಆಯುಕ್ತರು,(1)ನೇ ಉಪನಿಯಮದ ಮೇರೆಗೆ ವಿಚಾರಣೆಯಲ್ಲಿ ಭಾಗಿಯಾದ ವ್ಯಕ್ತಿಗಳಿಗೆ, ಅವನು ಅವಶ್ಯವೆಂದು ಪರಿಗಣಿಸಬಹುದಾದಂತಹ ಶುಲ್ಕವನ್ನು ಅಥವಾ ಭತ್ಯಗಳನ್ನು ಸಂದಾಯ ಮಾಡಲು ಆದೇಶ ನೀಡಬಹುದು, ಮತ್ತು ಅದನ್ನು ಬೆಂಗಳೂರು ಮೆಟ್ರೋ ರೈಲ್ವೆ ಆಡಳಿತ ವರ್ಗವು ಸಂದಾಯ ಮಾಡತಕ್ಕದ್ದು.

17. **ನಷ್ಟಪರಿಹಾರದ ಮೊತ್ತ**.–

(1) ಮರಣ ಅಥವಾ ಗಾಯಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡತಕ್ಕ ನಷ್ಟಪರಿಹಾರದ ಮೊತ್ತವು ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು.

(2) ಎರಡನೇ ಅನುಸೂಚಿಯ ಭಾಗ–11 ಅಥವಾ ಭಾಗ–111ರಲ್ಲಿ ನಿರ್ದಿಷ್ಟಪಡಿಸದೆ ಇರುವಂಥ ಸಂದಾಯ ಮಾಡತಕ್ಕ ನಷ್ಟಪರಿಹಾರದ ಮೊತ್ತವು, ಕ್ಲೇಮುಗಳ ಆಯುಕ್ತನ ಅಭಿಪ್ರಾಯದಲ್ಲಿ ಗಾಯವು ಒಬ್ಬ ವ್ಯಕ್ತಿಯನ್ನು ಯಾವುದೇ ರೀತಿಯ ಕೆಲಸವನ್ನು ನಿರ್ವಹಿಸಲು ಆತನ ಎಲ್ಲ ಸಾಮರ್ಥ್ಯವನ್ನು ವಂಚಿತಗೊಳಿಸಿದನೆಂದಾದಲ್ಲಿ ನಾಲ್ಕು ಲಕ್ಷ ರೂಪಾಯಿಗಳಾಗಿರತಕ್ಕದ್ದು.

(3) ನೋವು ಮತ್ತು ಯಾತನೆಗೆ ಕಾರಣವಾದಂಥ ಯಾವುದೇ ಗಾಯದ ಸಂಬಂಧದಲ್ಲಿ (ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಅಥವಾ (2)ನೇ ಉಪನಿಯಮದಲ್ಲಿ ಉಲ್ಲೇಖಿಸಿರುವ ಗಾಯವನ್ನು ಹೊರತುಪಡಿಸಿ) ಸಂದಾಯ ಮಾಡಬೇಕಾದ ನಷ್ಟಪರಿಹಾರದ

ಮೊತ್ತವು ಕ್ಲೇಮುಗಳ ಆಯುಕ್ತನು, ಪ್ರಕರಣದ ಇತರ ಸಂದರ್ಭ–ಸನ್ನಿವೇಶಗಳನ್ನಲ್ಲದೆ ವೈದ್ಯಕೀಯ ಸಾಕ್ಷ್ಯವನ್ನು ಪರಿಗಣನೆಗೆ ತೆಗೆದುಕೊಂಡ ನಂತರ, ಯುಕ್ತವೆಂದು ನಿರ್ಣಯಿಸಬಹುದಾದಂಥ ಮೊತ್ತವಾಗಿರತಕ್ಕದ್ದು :

ಪರಂತು, ಒಂದೇ ಅಪಘಾತದಿಂದ ಒಂದಕ್ಕಿಂತ ಹೆಚ್ಚು ಗಾಯಗಳು ಉಂಟಾಗಿದ್ದರೆ, ನಷ್ಟಪರಿಹಾರವನ್ನು ಅಂತಹ ಪ್ರತಿಯೊಂದು ಗಾಯಕ್ಕೆ ಸಂಬಂಧಿಸಿದಂತೆ ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(4) ಗಾಯಗೊಂಡ ವ್ಯಕ್ತಿಯು ಮೃತಪಟ್ಟಲ್ಲಿ ಅಥವಾ ವ್ಯಕ್ತಿಯು ಗಾಯದಿಂದಾಗಿ ತದನಂತರದಲ್ಲಿ ಮೃತಪಟ್ಟಲ್ಲಿ ಸಂದಾಯ ಮಾಡಬಹುದಾಗಿದ್ದ ನಷ್ಟಪರಿಹಾರದ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಯಾವುದೇ ಗಾಯಕ್ಕೆ ನಷ್ಟಪರಿಹಾರವಾಗಿ ಸಂದಾಯ ಮಾಡಿದ್ದರೆ, ಮರಣಕ್ಕಾಗಿ ಸಂದಾಯ ಮಾಡತಕ್ಕ ಮೊತ್ತ ಅಥವಾ ಈಗಾಗಲೇ ಸಂದಾಯ ಮಾಡಿರುವ ಮೊತ್ತ ಇವುಗಳ ಮಧ್ಯೆ ಇರುವ ವ್ಯತ್ಯಾಸಕ್ಕೆ ಸಮನಾದ ಮತ್ತಷ್ಟು ನಷ್ಟಪರಿಹಾರವನ್ನು ಸಂದಾಯ ಮಾಡತಕ್ಕದ್ದು.

(5) ಪ್ರಯಾಣಿಕನು, ತನ್ನ ವೈಯಕ್ತಿಕ ಸಾಮಾನು ಎಂದು ಕೊಂಡೊಯ್ಯುತ್ತಿರುವ ಸರಕುಗಳ ನಷ್ಟ, ನಾಶ ಅಥವಾ ಅವನತಿಗಾಗಿನ ನಷ್ಟಪರಿಹಾರವನ್ನು ಕ್ಲೇಮುಗಳ ಆಯುಕ್ತನು ಪ್ರಕರಣದ ಎಲ್ಲ ಸಂದರ್ಭ–ಸನ್ನಿವೇಶಗಳಲ್ಲಿ,

ಸಮಂಜಸವೆಂಬದಾಗಿ ನಿರ್ಣಯಿಸಬಹುದಾದಷ್ಟರವರೆಗೆ ಸಂದಾಯ ಮಾಡತಕ್ಕದ್ದು.

18. **ನಷ್ಟಪರಿಹಾರದ ಪರಿಮಿತಿ.–** 17ನೇ ನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಆ ನಿಯಮದ ಮೇರೆಗೆ ಸಂದಾಯ ಮಾಡತಕ್ಕ ಒಟ್ಟು ನಷ್ಟಪರಿಹಾರವು, ಯಾವುದೇ ಸಂದರ್ಭದಲ್ಲಿ ಯಾರೇ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ನಾಲ್ಕು ಲಕ್ಷ ರೂಪಾಯಿಗಳಿಗಿಂತ ಮೀರತಕ್ಕದ್ದಲ್ಲ.

**ಒಂದನೇ ಅನುಸೂಚಿ**
**(36(1)ನೇ ನಿಯಮವನ್ನು ನೋಡಿ)**
**ನಮೂನೆ**
**(3)ನೇ ನಿಯಮವನ್ನು ನೋಡಿ)**

ಪ್ರಯಾಣಿಕರ ಮರಣ ಅಥವಾ ಗಾಯದ ಸಂಬಂಧದಲ್ಲಿ ಅಥವಾ ಅವರು ತಮ್ಮ ವೈಯಕ್ತಿಕ ಸಾಮಾನು ಸರಕುಗಳನ್ನು ಒಯ್ಯುತ್ತಿದ್ದ ಸರಕುಗಳ ನಾಶ ಅಥವಾ ಹಾನಿಯ ಸಂಬಂಧದಲ್ಲಿ ನಷ್ಟಪರಿಹಾರವನ್ನು ಕ್ಲೇಮು ಮಾಡಲು, 2002ರ ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) (2002ರ 60) ಅಧಿನಿಯಮದ 58ನೇ ಪ್ರಕರಣದ ಮೇರೆಗೆ ಅರ್ಜಿ :

**ಭಾಗ–1**

ಪ್ರಕರಣದ ದಿನಾಂಕ ಮತ್ತು ವೇಳೆ :

**ಭಾಗ –11**

| ಕ್ರ.ಸಂ. | ಲಗತ್ತಿಸಿದ ದಸ್ತಾವೇಜುಗಳ ವಿವರ | ಪುಟ ಸಂಖ್ಯೆ |
|---|---|---|
| 1. | | |
| 2. | | |
| 3. | | |
| 4. | | |
| 5. | | |
| 6. | | |

----------

ಅರ್ಜಿದಾರನ ಸಹಿ

ಕ್ಲೇಮುಗಳ ಆಯುಕ್ತನ ಕಚೇರಿಯ ಬಳಕೆಗಾಗಿ
ದಾಖಲಿಸಿದ ದಿನಾಂಕ

ಅಥವಾ

ಅಂಚೆಯ ಮೂಲಕ ಸ್ವೀಕರಿಸಿದ ದಿನಾಂಕ
ನೋಂದಣಿ ಸಂ.

**ಎರಡನೇ ಅನುಸೂಚಿ**
**(17(1)ನೇ ನಿಯಮ ನೋಡಿ)**
**ಮರಣ ಮತ್ತು ಗಾಯಗಳಿಗೆ ಸಂದಾಯ ಮಾಡತಕ್ಕ ನಷ್ಟಪರಿಹಾರ**

**ಭಾಗ – I**

| ಕ್ರ. ಸಂ. | ಗಾಯದ ಸ್ವರೂಪ | ನಷ್ಟಪರಿಹಾರದ ಮೊತ್ತ (ರೂ.ಗಳಲ್ಲಿ) |
|---|---|---|
| (1) | (2) | (3) |
| | ಮರಣಕ್ಕೆ | 4,00,000 |

ಭಾಗ– II

| ಕ್ರ. ಸಂ. | ಗಾಯದ ಸ್ವರೂಪ | ನಷ್ಟಪರಿಹಾರದ ಮೊತ್ತ (ರೂ.ಗಳಲ್ಲಿ) |
|---|---|---|
| (1) | (2) | (3) |
| (1) | ಎರಡೂ ಕೈಗಳನ್ನು ಕಳೆದುಕೊಂಡಿದ್ದರೆ ಅಥವಾ ಹೆಚ್ಚಿನ ಭಾಗಗಳನ್ನು ಕತ್ತರಿಸಿ ತೆಗೆದಿದ್ದರೆ | 4,00,000 |
| (2) | ಕೈ ಮತ್ತು ಪಾದ ಕಳೆದುಕೊಂಡಿದ್ದರೆ | 4,00,000 |
| (3) | ಕಾಲು ಅಥವಾ ತೊಡೆಯ ಮೂಲಕ ಎರಡೂ ಕಡೆ ಕತ್ತರಿಸಿದ್ದರೆ ಅಥವಾ ಕಾಲು ಅಥವಾ ತೊಡೆಯ ಮೂಲಕ ಒಂದು ಭಾಗದಲ್ಲಿ ಕತ್ತರಿಸಿದ್ದರೆ ಮತ್ತು ಇನ್ನೊಂದು ಪಾದವು ನಷ್ಟವಾಗಿದ್ದರೆ | 4,00,000 |
| (4) | ಕಣ್ಣಿನ ದೃಷ್ಟಿ ಅತ್ಯಾವಶ್ಯಕವಾಗಿರುವಂಥ ಯಾವುದೇ ಕೆಲಸವನ್ನು ನಿರ್ವಹಿಸಲು ಕ್ಲೇಮುದಾರನನ್ನು ಅಸಮರ್ಥನನ್ನಾಗಿ ಮಾಡಿರುವಷ್ಟರ ಮಟ್ಟಿಗಿನ ಕಣ್ಣಿನ ದೃಷ್ಟಿಯ ನಷ್ಟಕ್ಕೆ | 4,00,000 |
| (5) | ಮುಖದ ಅತಿ ತೀವ್ರ ವಿರೂಪತೆಗೆ | 4,00,000 |
| (6) | ಸಂಪೂರ್ಣ ಕಿವುಡುತನಕ್ಕೆ | 4,00,000 |

**ಭಾಗ– III**

| (1) | (2) | (3) |
|---|---|---|
| (1) | ಭುಜದ ಕೀಲುಮೂಲಕ ಮಾಡಲಾದ ಅಂಗಚ್ಛೇದಕ್ಕೆ | 3,60,000 |
| (2) | ಅಕ್ರೊಮಿಯಾನ್ ತುದಿಯಿಂದ "8" ಇಂಚಿಗಿಂತ ಕಡಿಮೆ ತುಂಡರಿಸಿದ ಭುಜದ ಕೆಳಗಿನ ಅಂಗಚ್ಛೇಧಕ್ಕೆ | 3,20,000 |
| (3) | ಅಕ್ರೋಮಿಯಾನ್‌ನ ತುದಿಯಿಂದ '8' ಇಂಚಿನಿಂದ ಓಲೆಕ್ರನಾಸ್‌ನ ತುದಿಯ ಕೆಳಗೆ 4 1/2 ಇಂಚಿಗಿಂತ ಕಡಿಮೆ ಅಂಗಚ್ಛೇಧಕ್ಕೆ | 2,80,000 |
| (4) | ಕೈ ಅಥವಾ ಹೆಬ್ಬೆರಳು ಮತ್ತು ಒಂದು ಕೈನ ನಾಲ್ಕು ಬೆರಳುಗಳು ನಷ್ಟವಾಗಿದ್ದರೆ ಅಥವಾ ಓಲೆಕ್ರನಾನ್ ತುದಿಯಿಂದ ಕೆಳಗೆ 4 1/2 ಇಂಚಿಗಿಂತ ಕಡಿಮೆ ಅಂಗಚ್ಛೇಧಕ್ಕೆ | 2.40,000 |
| (5) | ಹೆಬ್ಬೆರಳು ನಷ್ಟವಾಗಿದ್ದರೆ | 1,20,000 |
| (6) | ಹೆಬ್ಬೆರಳು ಮತ್ತು ಅದರ ಮೆಟಕಾರ್ಪಲ್ ಮುಳೆ ನಷ್ಟವಾಗಿದ್ದರೆ | 1,60,000 |
| (7) | ಒಂದು ಕೈನ ನಾಲ್ಕು ಬೆರಳುಗಳು ನಷ್ಟವಾಗಿದ್ದರೆ | 2,00,000 |
| (8) | ಒಂದು ಕೈನ ಮೂರು ಬೆರಳುಗಳು ನಷವಾಗಿದ್ದರೆ | 1,20,000 |
| (9) | ಒಂದು ಕೈನ ಎರಡು ಬೆರಳುಗಳು ನಷ್ಟವಾಗಿದ್ದರೆ | 80,000 |
| (10) | ಹೆಬ್ಬೆರಳ ಟರ್ಮಿನಲ್ ಫಾಲಾಂಕ್ಸ್ ನಷ್ಟಕ್ಕೆ | 80,000 |
| (11) | ಎಂಡ್ ಬೇರಿಂಗ್ ತುಂಡರಿಕೆಗೆ ಕಾರಣವಾಗುವ ಎರಡೂ ಪಾದಗಳ ಅಂಗಚ್ಛೇಧ | 3,60,000 |

| | | |
|---|---|---|
| (12) | ಎರಡೂ ಪಾದಗಳ ಪ್ರಾಕ್ಸಿಮಲ್ ಮೂಲಕ ಮೆಟಟಾರ್ ಸೋಫಲಾಂಜಿಯಲ್ ಕೀಲಿನವರೆಗಿನ ಅಂಗಚ್ಛೇಧಕ್ಕೆ | 3,20,000 |
| (13) | ಮೆಟಟಾರ್ ಸೋಫಲಾಂಜಿಯಲ್ ಕೀಲಿನ ಮೂಲಕ ಎರಡೂ ಪಾದಗಳ ಎಲ್ಲ ಅಂಗುಷ್ಟಗಳ ನಷ್ಟಕ್ಕೆ | 1,60,000 |
| (14) | ಎರಡೂ ಪಾದಗಳ ಪ್ರಾಕ್ಸಿಮಲ್‌ನಿಂದ ಪ್ರಾಕ್ಸಿಮಲ್ ಇಂಟರ್ ಫಲಾಂಜಿಯಲ್ ಕೀಲಿನವರೆಗಿನ ಎಲ್ಲಾ ಅಂಗುಷ್ಟಗಳ ನಷ್ಟಕ್ಕೆ | 1,20,000 |
| (15) | ಪ್ರಾಕ್ಸಿಮಲ್ ಇಂಟರ್ ಫಲಾಂಜಿಯಲ್ ಕೀಲಿನವರೆಗೆ ಡಿಸ್ಟಲ್ ಆದ ಎರಡೂ ಪಾದಗಳ ಎಲ್ಲ ಅಂಗುಷ್ಟಗಳ ನಷ್ಟಕ್ಕೆ | 80,000 |
| (16) | ತೊಡೆ ಅಂಗಚ್ಛೇಧಕ್ಕೆ | 3,80,000 |
| (17) | ದೊಡ್ಡ ಟ್ರೆಂಜಾಂಟರ್‌ನ ತುದಿಯಿಂದ ಆದರೆ ಮಧ್ಯದ ತೊಡೆಯನ್ನು ಮೀರದಂಥ ಆಚೆಗಿರದ ಅಳತೆ ಮಾಡಲಾದ 5 ಇಂಚು ಉದ್ದವನ್ನು ಮೀರದ ತುಂಡರಿಕೆಯೊಂದಿಗೆ ತೊಡೆಯ ಕೆಳಭಾಗದ ಅಂಗಚ್ಛೇಧಕ್ಕೆ | 3,20,000 |
| (18) | ದೊಡ್ಡ ಟ್ರೆಂಜಾಂಟರ್‌ನ ತುದಿಯಿಂದ ಆದರೆ ಮಧ್ಯದ ತೊಡೆಯು ಮೀರದಂತೆ ಅಳತೆ ಮಾಡಲಾದ 5 ಇಂಚಿಗಿಂತ ಹೆಚ್ಚಿನ ತುಂಡರಿಕೆಯೊಂದಿಗೆ ತೊಡೆಯ ಕೆಳಭಾಗದ ಅಂಗಚ್ಛೇಧಕ್ಕೆ | 2,80,000 |
| (19) | ಮೊಣಕಾಲಿನ 3 1/2 ನವರೆಗೆ ಕೆಳಗೆ ಮಧ್ಯದ ತೊಡೆಯ ಕೆಳಗೆ ಮಾಡಲಾದ ಅಂಗಚ್ಛೇಧ | 2.40,000 |
| (20) | 3 1/2 ಇಂಚಿಗಿಂತ ಹೆಚ್ಚಾದ ಆದರೆ 5 ಇಂಚಿಗಿಂತ ಹೆಚ್ಚಾಗಿರದ ತುಂಡರಿಕೆಯೊಂದಿಗೆ ಮೊಣಕಾಲಿನ ಕೆಳಗೆ ಮಾಡಲಾದ ಅಂಗಚ್ಛೇಧ | 2,00,000 |
| (21) | ಪಾರಾಪ್ಲೆಜಿಯಾದೊಂದಿಗೆ ಬೆನ್ನುಮೂಳೆಯ ಮುರಿತಕ್ಕೆ | 2,00,000 |
| (22) | 5’ ಇಂಚಿಗಿಂತ ಹೆಚ್ಚಿನ ತುಂಡರಿಕೆಯೊಂದಿಗೆ ಮೊಣಕಾಲ ಕೆಳಗೆ ಮಾಡಿದ ಅಂಗಚ್ಛೇಧ | 1,60,000 |

| | | |
|---|---|---|
| (23) | ಒಂದು ಕಣ್ಣು ನಷ್ಟವಾಗಿದ್ದು ಇನ್ನೊಂದು ತೊಂದರೆ ತೊಡಕುಗಳಿಲ್ಲದೆ ಸಹಜವಾಗಿದ್ದರೆ | 1,60,000 |
| (24) | ಎಂಡ್ ಬ್ಬೆರಿಂಗ್‌ನಲ್ಲಿ ಪರಿಣಮಿಸುವ ಒಂದು ಪಾದವು ಅಂಗಚ್ಛೇಧ | 1,20,000 |
| (25) | ಮೆಟಟಾರ್ಸ್ಸೋಫಲಾಂಜಿಯಲ್ ಕೀಲಿನವರೆಗೆ ಪ್ರಾಕ್ಸಿಮಲ್ ಆಗಿರುವ ಒಂದು ಪಾದ ಕತ್ತರಿಸಿ ಹೋಗಿದ್ದರೆ | 1,20,000 |
| (26) | ಪ್ಯಾರಾಪ್ಲೇಜಿಯಾ ಇಲ್ಲದೆ ಬೆನ್ನುಮೂಳೆ ಮುರಿತಕ್ಕೆ | 1,20,000 |
| (27) | ಕಣ್ಣಿನ ಗುಡ್ಡೆಗೆ ವಿರೂಪತೆಯ ತೊಡಕು ಇಲ್ಲದೆ ಒಂದು ಕಣ್ಣಿನ ದೃಷ್ಟಿ ನಾಶವಾಗಿದ್ದು ಇನ್ನೊಂದು ಸಹಜ ಸ್ಥಿತಿಯಲ್ಲಿದ್ದರೆ | 1,20,000 |
| (28) | ಮೆಟಟಾರ್ಸ್ಸೋಫಲಾಂಜಿಯಲ್ ಕೀಲಿನ ಮೂಲಕ ಒಂದು ಪಾದದ ಎಲ್ಲ ಅಂಗುಷ್ಟಗಳ ನಷ್ಟಕ್ಕೆ | 80,000 |
| (29) | ಸೊಂಟದ ಕೀಲು ಮುರಿದಿದ್ದರೆ | 80,000 |
| (30) | ಪ್ರಮುಖ ಮೂಳೆಯ ಮುರಿತ – ಫೆಮರ್, ಎರಡೂ ಮೊಣಕಾಲಿನ ಟಿಬಿಯಾ | 80,000 |
| (31) | ಪ್ರಮುಖ ಮೂಳೆ ಮುರಿತ –ಹ್ಯೂಮೆರಸ್ ಎರಡೂ ಮೊಣಕಾಲುಗಳ ತ್ರಿಜ್ಯ | 60,000 |
| (32) | ಕೀಲು ಸೇರಿರದ ಪೆಲ್ವಿಸ್ ಮುರಿತ | 40,000 |
| (33) | ಪ್ರಮುಖ ಮೂಳೆಯ ಮುರಿತ – ಫಿಮರ್, ಒಂದು ಮೊಣಕಾಲಿನ ಟಿಬಿಯ | 40,000 |
| (34) | ಪ್ರಮುಖ ಮೂಳೆಯ ಮುರಿತ – ಹ್ಯೂಮರಸ್, ಒಂದು ಮೊಣಕಾಲಿನ ರೇಡಿಯಸ್ ಮತ್ತು ಉಲ್ನ | 32,000 |

**ಭಾಗ-III**

**ಕ್ಲೇಮುಗಳ ಆಯುಕ್ತನ ಕಚೇರಿ**
**---------ಅರ್ಜಿದಾರ**
**ಮತ್ತು**
**ಮೆಟ್ರೋ ರೈಲ್ವೆ ಆಡಳಿತ ವರ್ಗದ ನಡುವೆ**

1. ಅರ್ಜಿದಾರನ ವಿವರಗಳು :
   ಹೆಸರು ಮತ್ತು ವಿಳಾಸ :

   1. ಕ್ಲೇಮಿನ ಮೌಲ್ಯ

2. (i) ಪ್ರಕರಣದ ಸಂಗತಿಗಳು:

   ಇಲ್ಲಿ, ಸಂಗತಿಗಳ ಸಂಕ್ಷಿಪ್ತ ಹೇಳಿಕೆಗಳನ್ನು ಕಾಲಾನುಕ್ರಮದಲ್ಲಿ, ಪ್ರತಿಯೊಂದು ಪ್ಯಾರಾನಲ್ಲಿ ಸಾಧ್ಯವಾದಷ್ಟು ನಿಕಟವಾಗಿ ಒಂದು ಪ್ರತ್ಯೇಕ ವಿಷಯ, ಸಂಗತಿ ಅಥವಾ ಇನ್ನು ಯಾವುದೇ ವಿಷಯ ಒಳಗೊಂಡಂತೆ ನೀಡಿ.

   (ii) (ಎ) ಕೋರಲಾದ ಪರಿಹಾರದ ಸ್ವರೂಪ
   (ಬಿ) ಪರಿಹಾರದ ಕಾರಣ

4. (i) ಹಿಂದೆ ದಾಖಲ್ಮಾಡಿಲ್ಲದ ಅಥವಾ ಯಾವುದೇ ಇತರ ನ್ಯಾಯಾಲಯದಲ್ಲಿ ಬಾಕಿ ಇಲ್ಲದಿರುವ ವಿಷಯಗಳು. (ಅರ್ಜಿದಾರನು, ಪ್ರಸಕ್ತ ಅರ್ಜಿಯನ್ನು ಸಲ್ಲಿಸಿರುವುದರ ಸಂಬಂಧದಲ್ಲಿ ವಿಷಯ ಕುರಿತಂತೆ, ಯಾವುದೇ ಕ್ಲೇಮು, ರಿಟ್ ಅರ್ಜಿ ಅಥವಾ ದಾವೆಯನ್ನು ಹಿಂದೆ ದಾಖಲ್ಮಾಡಿದ್ದನೆ ಎಂಬುದನ್ನು ತಿಳಿಸಿ)

   (ii) ಅರ್ಜಿದಾರರು ಹಿಂದೆ ಯಾವುದೇ ಕ್ಲೇಮುಗಳನ್ನು, ಅರ್ಜಿ, ದಾವೆಯ ರಿಟ್ ಅರ್ಜಿಯನ್ನು ದಾಖಲ್ಮಾಡಿದ್ದ ಸಂದರ್ಭದಲ್ಲಿ ಅದು ಬಾಕಿ ಇರುವ ಹಂತವನ್ನು ಸೂಚಿಸಿ, ಹಾಗೂ ಅದು ಇತ್ಯರ್ಥಗೊಂಡಿದ್ದರೆ, ಆದೇಶದ ಒಂದು ಪ್ರಮಾಣಿತ ಪ್ರತಿಯನ್ನು ಲಗತ್ತಿಸಿ.

5. **ಲಗತ್ತುಗಳ ಪಟ್ಟಿ :**

1.

2.

3.

4.

**ಪರಿಶೀಲನೆ**

----------- ನಿವಾಸಿಯಾದ -------- ವಯಸ್ಸಿನ ------ರ ಮಗ /ಮಗಳು/ಹೆಂಡತಿಯಾದ ನಾನು ------- (ಅರ್ಜಿದಾರನ ಹೆಸರು) -------ರಿಂದ --------ವರೆಗಿನ ಪ್ಯಾರಾಗ್ರಾಫ್‌ಗಳು ನನ್ನ ವೈಯಕ್ತಿಕ ತಿಳಿವಳಿಕೆಯ ಮೇರೆಗೆ ನಿಜವಾದುದು, ಸತ್ಯವಾದುದು ಮತ್ತು --------ರಿಂದ ---ರವರೆಗಿನ ಪ್ಯಾರಾಗ್ರಾಫ್‌ಗಳು ನನ್ನ ಅತ್ಯುತ್ತಮ ಅರಿವಿನ ಮಟ್ಟಿಗೆ ಅಥವಾ ನನಗೆ ನೀಡಲಾದ ಕಾನೂನು ಸಲಹೆಯ ಮಟ್ಟಿಗೆ ನಿಜವೆಂಬುದಾಗಿ ನಂಬಿದ್ದೇನೆ ಮತ್ತು ನಾನು ಯಾವುದೇ ಮುಖ್ಯ ಸಂಗತಿಯನ್ನು ಅಡಗಿಸಿಲ್ಲ/ಮರೆಮಾಡಿಲ್ಲ.

--------
ಅರ್ಜಿದಾರನ ಸಹಿ
ಪೂರ್ಣ ವಿಳಾಸ

ದಿನಾಂಕ-----
ಸ್ಥಳ -----

(ಎಫ್.ಸಂ.ಕೆ.-14011/45/2010-ಮೆಟ್ರೋ)
ಎಸ್.ಕೆ.ಲೋಹಿಯ ಓ.ಎಸ್.ಡಿ. (ನಗರ ಸಾರಿಗೆ) ಮತ್ತು
ಕಾರ್ಯನಿರ್ವಹಣೆ ಅಧಿಕಾರಿ, ಜಂಟಿ ಕಾರ್ಯದರ್ಶಿ